O.S.No.:137/13

P.W.:3

ಈ ದಿನ ದಿಃ 21-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ. 6 ರ ಪರ ಶ್ರೀ ಎಸ್.ಜಿ.ಪಿ. ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಅಲ್ಪ ಸ್ವಲ್ಪ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಪ್ರಸ್ತುತ ದಾವೆಯನ್ನು ಜಮೀನು ಕಡಿಮೆ ಆಗಿದ್ದಕ್ಕಾಗಿ ದಾಖಲಿಸಿರುತ್ತೇವೆ. ನನ್ನ ಖಾಯಂ ವಿಳಾಸ ಶಿರಗಾಂವ ಗ್ರಾಮ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ. 384/1 ಇರುತ್ತದೆ. ದಾವಾ ಆಸ್ತಿಯ ಉತಾರದಲ್ಲಿ ಅನಿಲ ದೇವಪ್ಪ ಖೋತ ವಿಸ್ತಿರ್ಣ 1 ಎಕರೆ ಮತ್ತು ಲಕ್ಷ್ಮಣ ಸಿದ್ದಪ್ಪ ಪೂಜಾರಿ ರವರ ವಿಸ್ತಿರ್ಣ 1 ಎಕರೆ, ಪುಂಡಲೀಕ ರಾಮಾ ಕರಡೆ ರವರ ವಿಸ್ತಿರ್ಣ 5 ಎಕರೆ 24 ಗುಂಟೆ, ಮಾರುತಿ ವಾಳಕೆ ರವರ ವಿಸ್ತಿರ್ಣ 6 ಎಕರೆ ಮತ್ತು ಅವರ ಹೆಸರು ಇರುತ್ತದೆ. ಉತಾರದಲ್ಲಿ ಹೆಸರಿರುವ ಎಲ್ಲರಿಗೂ ಪಕ್ಷಗಾರರನ್ನಾಗಿ ಮಾಡಿದ್ದಿರಾ ಎಂದರೆ ಇಲ್ಲ. ದಾವೆ ಹಾಕುವ ಸಮಯದಲ್ಲಿ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

ವಾದಿ ನಂ. 2 ರವರ ವಯಸ್ಸು 45 ಇರುತ್ತದೆ. ಅವರು ಮನೆಯಲ್ಲಿಯೇ ಇರುತ್ತಾರೆ ಮತ್ತು ಮನೆಕೆಲಸ ಮಾಡುತ್ತಾರೆ. ಅವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲಾ ಎಂದರೆ ಅವರ ಕಾಲಲ್ಲಿ ನೋವು ಇತ್ತು ಆ ಕಾರಣ ಬಂದಿಲ್ಲ. ಆ ಬಗ್ಗೆ ಡಾಕ್ಟರ್ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ. ಪ್ರತಿವಾದಿ ನಂ. 6 ರವರು ಈ ಆಸ್ತಿಯನ್ನು ಖರೀದಿ ತಗೆದುಕೊಳ್ಳುವ ಪೂರ್ವದಲ್ಲಿ ಅದು ಗುರುಪಾದ ಕರಡೆ ರವರ ಹೆಸರಿನಲ್ಲಿತ್ತು . ಪ್ರತಿವಾದಿ ನಂ. 6 ರವರು ಈ ಆಸ್ತಿಯನ್ನು 2006 ರಲ್ಲಿ ಖರೀದಿಸಿರುತ್ತಾರೆ. ಅವರು ಖರೀದಿ ಮಾಡುವ ಕಾಲಕ್ಕೆ ತಕರಾರು ಮಾರಿದ್ದಿರಾ ಎಂದರೆ ನಮಗೆ ಗೊತ್ತಾಗಲ್ಲಿಲ . ಯಾವಾಗ ಗೊತ್ತಾಗಿರುತ್ತದೆ ಎಂದರೆ ಗೊತ್ತಾದ ನಂತರ ನ್ಯಾಯಾಲಯಕ್ಕೆ ಬಂದಿರುತ್ತೇವೆ. ನಾನು ತಹಶಿಲ್ದಾರ ಮತ್ತು ಎಸಿ ಕಛೇರಿಯಲ್ಲಿ ತಕರಾರನ್ನು ದಾಖಲಿಸಿರುವುದಿಲ್ಲ.

ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ ಆಲಿಸಿ ನ್ಯಾಯದ ಹಿತದೃಷ್ಟಿಯಿಂದ ಪಾಟೀ ಸವಾಲನ್ನು ಮುಂದಿನ ಮುದ್ದತ್ತಿಗೆ ಮುಂದೂಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.